**O.S./ 485/2019**
**Plaintiff examined as PW.1**

ದಿನಾಂಕಃ **09.09.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲುಃ **1** ನೇ ಪ್ರತಿವಾದಿ ಪರ ಶ್ರೀ. ಎಮ್. ಎಸ್. ವೈ ವಕೀಲರಿಂದಃ

ನಮ್ಮ ಮಾವನವರ ಹೆಸರು ನಂಜುಡಪ್ಪ. ನಂಜುಡಪ್ಪರವರಿಗೆ ಒಟ್ಟು 6 ಜನ ಮಕ್ಕಳು. ಗೌರಮ್ಮ, ನಾರಾಯಣಪ್ಪ, ಮುನಿರಾಮು, ಚಿನ್ನಮ್ಮ, ಕೃಷ್ಣಪ್ಪ, ಮುನಿರತ್ನಮ್ಮ. ನಮ್ಮ ಮಾವನವರಿಗೆ ಒಟ್ಟು 3.50 ಎಕರೆ ಜಮೀನು ಇತ್ತು. ಅದನ್ನು ಹೊರತುಪಡಿಸಿ ಮನೆ, ಆಸ್ತಿಗಳು 3 ಕಡೆ ಇತ್ತು. ಯಾವ ಯಾವುದು ಎಂದರೆ ನನಗೆ ನಂಬರಗಳು ನೆನಪಿಲ್ಲ, ಊರಳೊಗೆ ಗ್ರಾಮಠಾಣಾದಲ್ಲಿ ಇತ್ತು. ಖಾನೇಶಕುಮಾರಿ ನಂಬರ-27 ನಿಮ್ಮ ಮಾವನವರ ಸ್ವತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ನಂಬರಗಳು ನೆನಪಿಲ್ಲ. ನಿಮ್ಮ ಮಾವನವರಿಗೆ ಯಾವ ಯಾವ ಸರ್ವೆ ನಂಬರ ದಲ್ಲಿ ಎಷ್ಟು ಎಷ್ಟು ಜಮೀನು ಇತ್ತು ಎಂದರೆ ನೆನಪಿಲ್ಲ. ಸರ್ವೆ ನಂಬರಃ 59/1 ರಲ್ಲಿ 1 ಎಕರೆ 10 ಗುಂಟೆ ಜಮೀನು ಸಿಂಗಸಂದ್ರ ಗ್ರಾಮ, ಬೆಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕಿನಲ್ಲಿ ನಿಮ್ಮ ಮಾವನ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸರ್ವೆ ನಂಬರ-120 ರಲ್ಲಿ 25 1/2 ಗುಂಟೆ, ಸಿಂಗಸಂದ್ರ ಗ್ರಾಮ, ಬೆಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕಿನಲ್ಲಿ ನಿಮ್ಮ ಮಾವನ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸರ್ವೆ ನಂಬರಃ54/1 ರಲ್ಲಿ 1 ಎಕರೆ 13 ಗುಂಟೆ ಮಧ್ಯದಲ್ಲಿ ಖಾನೇಶಕುಮಾರಿ ನಂಬರ-27 ನಿಮ್ಮ ಮಾವನವರ ಹೆಸರಿನಲ್ಲಿ ಇತ್ತು ಎಂದರೆ ಇರಬೇಕು ನನಗೆ ನೆನಪಿಲ್ಲ. ನಿಮ್ಮ

ಮಾವನವರ ಜೀವಿತಾವಧಿಯಲ್ಲಿ ಮೇಲೆ ಹೇಳಿದ 3 ಸರ್ವೆ ನಂಬರದಲ್ಲಿ ಅವರೇ ಉಳಿಮೆ ಮಾಡುತ್ತಿದ್ದರು ಎಂದರೆ ಸರಿ. ಅವರು 2001 ರಲ್ಲಿ ಕಾಲವಾದರು. ನಿಮ್ಮ ಮಾವನವರು ಕಾಲವಾದ ನಂತರ ನಿಮ್ಮ ಮನೆಯವರು ಮತ್ತು ಅಣ್ಣ-ತಮ್ಮಂದಿರು ದಿಃ30.04.2001 ರಲ್ಲಿ ಪಂಚಾಯತ್ ಪಾರಿಕತ್ವ ವನ್ನು ಮಾಡಿಕೊಂಡಿದ್ದರು ಎಂದರೆ ಮನೆಗಳನ್ನು ಸೇರಿಸಿರಲಿಲ್ಲ, ಜಮೀನುಗಳನ್ನು ಮಾತ್ರ ಬರೆದುಕೊಂಡಿದ್ದರು. ಸರ್ವೆ ನಂಬರಃ 59/1 ರಲ್ಲಿ 1 ಎಕರೆ 10 ಗುಂಟೆಯ ಪೈಕಿ ನಾರಾಯಣಪ್ಪರವರ ಭಾಗಕ್ಕೆ ಹೋಗಿತ್ತು ಎಂದರೆ ಆ ಬಗ್ಗೆ ಅವರು ದಾಖಲೆಗಳನ್ನು ಮಾಡಿಕೊಂಡಿಲ್ಲ, ಬರೆದುಕೊಂಡು ಇಟ್ಟು ಕೋಂಡಿದ್ದಾರೆ, ಸ್ವಾಧೀನದಲ್ಲಿ ಅವರೇ ಇದ್ದಾರೆ. ನಿಮ್ಮ ಯಜಮಾನರಿಗೆ ಸರ್ವೆ ನಂಬರ 125 ರಲ್ಲಿ 25 1/2 ಗುಂಟೆ ಜಮೀನು ಬಂದಿದೆ ಎಂದರೆ ಸರಿಯಲ್ಲ. ಅದೇ ರೀತಿ ಸರ್ವೆ ನಂಬರಃ 54/1 ರಲ್ಲಿ 1 ಎಕರೆ 13 ಗುಂಟೆ ಜಮೀನು ಕೃಷ್ಣಪ್ಪ ರವರ ಭಾಗಕ್ಕೆ ಹೋಗಿತ್ತು ಎಂದರೆ ಸರಿ. ಖಾನೇಶಕುಮಾರಿ ನಂಬರ-27 ರ ಪೂರ್ವ- ಪಶ್ಚಿಮ-29 ಅಡಿಗಳು, ಉತ್ತರ-ದಕ್ಷಿಣ-30 ಅಡಿಗಳು ಕೃಷ್ಣಪ್ಪರವರ ಹೆಸರಿಗೆ ಹೋಗಿತ್ತು ಎಂದರೆ ಹೋಗಿರಬಹುದು. ಸರ್ವೆ ನಂಬರಃ 59/1 ರಲ್ಲಿ 10 ಗುಂಟೆ ಜಮೀನು ನಾರಾಯಣಪ್ಪ ಕೃಷ್ಣಪ್ಪ ಮತ್ತು ಮುನಿರಾಮು 3 ಜನರ ಹೆಸರಿಗೆ ಹೋಗಿತ್ತು ಎಂದರೆ ಸರಿಯಲ್ಲ.ಸಾಕ್ಷಿ ಮುಂದುವರೆದು ಅದು ನಮ್ಮ ಯಜಮಾನರಾದ ಮುನಿರಾಮುರವರಿಗೆ ಬರಬೇಕು ಅದನ್ನು ನಾವೇ ಅನುಭವಿಸುತ್ತಿದ್ದೇವೆ.

ಸಿ ಸಿ ಹೆಚ್-3 ಅಥವಾ 13 ರಲ್ಲಿ ಹಳೇ ಕೇಸು ಈಗಲೂ ನಡೆಯುತ್ತಿದೆ

ಕೇಸ ನಂಬರ ನೆನಪಿಲ್ಲ. ಯಾರು ಹಾಕಿದ್ದರು ಎಂದರೆ ನಮ್ಮ ಮಾವನವರು, ಯಾರ ಮೇಲೆ ಎಂದರೆ ಅವರ ಅಣ್ಣಂದಿರ ಮೇಲೆ ಹಾಕಿದ್ದರು. ಆ ಕೇಸಿನಲ್ಲಿ ಈಗ ಹೇಳಿದ ಸರ್ವೆ ನಂಬರಗಳು ಇದೇಯೆ ಎಂದರೆ ಇರಬಹುದು. ನಿಮ್ಮ ಮಾವನವರು ಹಾಕಿರುವ ಹಳೇ ಕೇಸನಲ್ಲಿ ಗುರುಮೂರ್ತಿರವರು ಪಕ್ಷಕಾರರಾಗಿದ್ದಾರೆಯೇ ಎಂದರೆ ಇಲ್ಲ. 2001 ರಲ್ಲಿ ಆಗಿದ್ದ ಪಂಚಾಯತ್ ಪಾರಿಕತ್ ನ್ನು ನ್ಯಾಯಾಲಯಕ್ಕೆ ಮುಂದಿನ ದಿನಾಂಕದಂದು ಹಾಜರು ಪಡಿಸಲು ನಿಮಗೆ ತೊಂದರೆ ಇಲ್ಲ ಎಂದರೆ ಆಗಲ್ಲ. ಯಾಕೆಂದರೆ ಎಲ್ಲೇ ಎಲ್ಲಿ ಬರೆದು ಎಲ್ಲಿ ಇಟ್ಟು ಕೊಂಡಿದ್ದಾರೆ ನನಗೆ ನೆನಪಿಲ್ಲ. ಖಾನೇಶಕುಮಾರಿ ನಂಬರ-27 ರ ಪೂರ್ವ-ಪಶ್ಚಿಮ-29 ಅಡಿಗಳು, ಉತ್ತರ-ದಕ್ಷಿಣ-30 ಅಡಿಗಳ ಸ್ವತ್ತಿಗೂ ನಿಮ್ಮ ಯಜಮಾನರಾದ ಮುನಿರಾಮುರವರಿಗೆ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿ. ಕೃಷ್ಣಪ್ಪರವರ ಜೀವಿತಾವಧಿಯ ಕಾಲದಲ್ಲಿ ಅವರ ಮಗನಾದ ಮಂಜುನಾಥರವರಿಗೆ ಖಾನೇಶಕುಮಾರಿ ನಂಬರ-27 ಪೂರ್ವ-ಪಶ್ಚಿಮ-29 ಅಡಿಗಳು, ಉತ್ತರ-ದಕ್ಷಿಣ-30 ಅಡಿಗಳ ಸ್ವತ್ತನ್ನು ನೊಂದಾಯಿತ ದಾನ ಪತ್ರವಾಗಿ ಮಾಡಿಕೊಟ್ಟಿದದರು ಎಂದರೆ ಇರಬಹುದು ಅವರು ಮಾಡಿಕೊಟ್ಟಿರುವುದು ನನಗೆ ಗೊತ್ತಿಲ್ಲ.

ನೀವು ದಾವೆ ಹೂಡಿರುವ ಸ್ವತ್ತು ಯಾವ ಸರ್ವೆ ನಂಬರಗೆ ಸಂಬಂಧಿಸಿದ್ದು ಎಂದರೆ ಸರ್ವೇ ನಂಬರ-79. ನಾರಾಯಣಪ್ಪರವರಿಂದ ನಿಮ್ಮ ಯಜಮಾನರಾದ ಮುನಿರಾಮುರವರ ಭಾಗಕ್ಕೆ ಯಾವ ಯಾವ ಜಮೀನು, ಸ್ವತ್ತು ಬಂದಿತ್ತು ಎಂದು ತೋರಿಸಲು ಯಾವ ದಾಖಲೆಗಳನ್ನು ನ್ಯಾಯಾಲಯಕ್ಕೆ

ಹಾಜರು ಪಡಿಸಿದ್ದೀರಾ ಎಂದರೆ ನಮಗೆ ಸೇರಿದ್ದ ಸ್ವತ್ತು, ಮನೆಯ ಜಾಗಗಳ ಎಲ್ಲಾ ದಾಖಲೆಗಳನ್ನು ನಾನು ಹಾಜರು ಪಡಿಸಿದ್ದೇನೆ. ಸರ್ವೆ ನಂಬರಃ59/1 ರ ಖಾತಾ ಸಂಖ್ಯೆ ಃ 59/1, 2018 ನೇ ಇಸವಿಯ ಪೂರ್ವದಲ್ಲಿ ನಿಮ್ಮ ಯಜಮಾನರಾದ ಮುನಿರಾಮುರವರ ಭಾಗಕ್ಕೆ ಬಂದಿತ್ತು ಎಂದು ತೋರಿಸಲು ಯಾವ ದಾಖಲೆಯನ್ನು ಹಾಜರು ಪಡಿಸಿದ್ದೀರಿ ಎಂದರೆ ಅವರು ಬರೆದುಕೊಂಡಿದ್ದರು ಆ ದಾಖಲೆಯನ್ನು ಹಾಜರು ಪಡಿಸಿದ್ದೇನೆ. ಏನು ಬರೆದುಕೊಂಡಿದ್ದರು ಎಂದರೆ ನಮ್ಮ ಯಜಮಾನರ ಹೆಸರಿಗೆ ಅವರ ತಂದೆ ವಿಲ್ ಯಾ ಮರಣ ಶಾಸನ ಪತ್ರವನ್ನು ಮಾಡಿದ್ದರು ಮತ್ತು ಪಾಲು ಪಟ್ಟಿಯಲ್ಲಿ ಬರೆದುಕೊಂಡಿದ್ದರು. ನಿಮ್ಮ ಯಜಮಾನರಿಗೆ ವಿಲ್ ಯಾ ಮರಣ ಶಾಸನ ಪತ್ರ ಮತ್ತು ಪಂಚಾಯತ್ ಪಾರಿಕತ್ ನ್ನು ಮುಂದಿನ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರು ಪಡಿಸಲು ನಿಮಗೆ ತೊಂದರೆ ಇಲ್ಲ ಎಂದರೆ ನೋಡುತ್ತೇನೆ, ಹಳೆಯ ದಾಖಲೆಗಳು.

ಮುಂದುವರಿದ ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

**(ನಿಶಾ ರಾಣಿ ಎ. ಸಿ)**
**III ನೇ ಎ.ಸಿ.ಸಿ & ಎಸ್.ಜೆ,**
**ಬೆಂಗಳೂರು.**